**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ರವರ ನ್ಯಾಯಾಲಯ, ಚಳ್ಳಕೆರೆ.**

**ಸಿ.ಸಿ. ನಂ. 1698/2022**

ಪ್ರಮಾಣ ವಚನ ಬೋಧಿಸಲಾಯಿತು.

| | | | |
|---|---|---|---|
| ಹೆಸರು | : | ವೆಂಕಟೇಶ | ಸಿ.ಡಬ್ಲ್ಯೂ –09 |
| ತಂದೆ ಹೆಸರು | : | ರಂಗಪ್ಪ | ಪಿ.ಡಬ್ಲ್ಯೂ –10 |
| ವಯಸ್ಸು | : | 42 ವರ್ಷ | |
| ಉದ್ಯೋಗ | : | ಕೂಲಿ ಕೆಲಸ | |
| ವಾಸಸ್ಥಳ | : | ಹಿರೇಕೋಗಲೂರು | ದಿಃ 29.07.2026 |

**ಮುಖ್ಯ ವಿಚಾರಣೆ: ಮಾನ್ಯ ಎ.ಪಿ.ಪಿ. ರವರಿಂದಃ**

ಮೃತ ಗಂಗಮ್ಮ ನನ್ನ ಹೆಂಡತಿ .

ಈಗ್ಗೆ 4 ವರ್ಷಗಳ ಹಿಂದೆ ಗಂಗಮ್ಮ ಆರೋಪಿಯ ಜೊತೆ ಪಾವಗಡಕ್ಕೆ ಬೈಕಿನಲ್ಲಿ ಹೋಗಿದ್ದಾಗ ದೊಡ್ಡೇರಿಯ ಹತ್ತಿರ ಅಪಘಾತವಾಗಿರುತ್ತದೆ. ಚಾಸಾ–1 ರವರು ದೂರನ್ನು ನೀಡಿರುತ್ತಾರೆ. ನಂತರ ನಾನು ಬೆಂಗಳೂರು ನಿಮಾನ್ಸ್ ಆಸ್ಪತ್ರೆಗೆ ಹೋಗಿರುತ್ತೇನೆ. ಗಂಗಮ್ಮ ರವರ ತಲೆಗೆ ಪೆಟ್ಟುಗಳಾಗಿದ್ದವು. ನಂತರ ಗಂಗಮ್ಮ ರವರನ್ನು ದಾವಣಗೆರೆ ಆಸ್ಪತ್ರೆಗೆ ಸೇರಿಸಿದ್ದು ಅಲ್ಲಿ ಮೃತರಾಗಿರುತ್ತಾರೆ.

ಯಾರ ತಪ್ಪಿನಿಂದ ಅಪಘಾತವಾಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ಅಪಘಾತ ನಡೆದ ನಂತರ ನಾನು ಠಾಣೆಗೆ ಹೋಗಿರುವುದಿಲ್ಲ. ಈ ಬಗ್ಗೆ ನಾನು ಪೊಲೀಸರಿಗೆ ಹೇಳಿಕೆಯನ್ನು ನೀಡಿರುವುದಿಲ್ಲ. ಆರೋಪಿಯನ್ನು ನ್ಯಾಯಾಲಯಕ್ಕೆ ಬಂದಾಗ ನೋಡಿರುತ್ತೇನೆ.

**( ಈ ಹಂತದಲ್ಲಿ ಸಹಾಯಕ ಸರ್ಕಾರಿ ಅಭಿಯೋಜಕರು ಸದರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲಿಗಾಗಿ ಅನುಮತಿ ಕೋರಿರುತ್ತಾರೆ, ಸಾಕ್ಷಿಯ ಹೇಳಿಕೆ ಹಾಗೂ ದಾಖಲೆಗಳನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು)**

**ಪಾಟೀ ಸವಾಲು ಮಾನ್ಯ ಎ.ಪಿ.ಪಿ. ರವರಿಂದಃ**

ದಿನಾಂಕ 05.02.2022 ರಂದು ಗಂಗಮ್ಮ ರವರು ರಮೇಶ್ ರವರ ಜೊತೆ ಕೆಎ–16 ಇಇ–7502 ನೇ ವಾಹನಲ್ಲಿ ಚಿಕ್ಕಜಾಜೂರಿನಿಂದ ಪಾವಗಡ ರಸ್ತೆ ಕಡೆ ಹೋಗುತ್ತಿದ್ದರು ಎಂದರೆ ಸರಿ.ರಸ್ತೆ ಯಲ್ಲಿದ್ದ ತಗ್ಗು ಗುಂಡಿಗಳ ಮೇಲೆ ಬೈಕನ್ನು ಹತ್ತಿಸಿದ್ದರಿಂದ ಗಂಗಮ್ಮ ಆಯಾ ತಪ್ಪಿ ಕೆಳಗೆ

ಬಿದ್ದಿರುತ್ತಾರೆ ಎಂದರೆ ಸರಿ. ಆಗ ಗಂಗಮ್ಮ ರವರ ತಲೆಗೆ ಪೆಟ್ಟು ಬಿದ್ದು ಪ್ರಜ್ಞಾಹೀನರಾಗಿದ್ದು, ಆರೋಪಿಯೇ ಆಸ್ಪತ್ರೆಗೆ ದಾಖಲಿಸಿರುತ್ತಾರೆ ಎಂದರೆ ಸರಿ. ನಂತರ ಚಿತ್ರದುರ್ಗ ಬಸವೇಶ್ವರ ಆಸ್ಪತ್ರೆಯಲ್ಲಿ ನಾನು , ಚಾಸಾ-10 ಮತ್ತು 1 ರವರು ಗಂಗಮ್ಮ ರವರನ್ನು ನೋಡಿರುತ್ತೇವೆ ಎಂದರೆ ಸರಿ. ನಂತರ ನಿಮಾನ್ಸ್ ಗೆ ಸೇರಿಸಲಾಗಿರುತ್ತದೆ ಎಂದರೆ ಸರಿ. ಆಗ ಆರೋಪಿಯು ದೂರು ಕೊಡುವುದು ಬೇಡ ಆಸ್ಪತ್ರೆ ಖರ್ಚು ಕೊಡುವುದಾಗಿ ಹೇಳಿದ್ದರು ಎಂದರೆ ಸರಿ. ಆರೋಪಿಯು ಯಾವುದೇ ಖರ್ಚನ್ನು ನೀಡದ ಕಾರಣ ಚಾಸಾ-1 ರವರು ದಿನಾಂಕ 15.02.2022 ರಂದು ದೂರನ್ನು ನೀಡಿರುತ್ತಾರೆ ಎಂದರೆ ಸರಿ. ಆರೋಪಿಯ ನಿರ್ಲಕ್ಷ್ಯದಿಂದ ಅಪಘಾತವಾಗಿರುತ್ತದೆ ಎಂದು ದೂರು ನೀಡಿರುತ್ತಾರೆ ಎಂದರೆ ಸರಿ. ಈ ಬಗ್ಗೆ ನಾನು ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿ.

ದಿನಾಂಕ 25.04.2022 ರಂದು ಗಂರಮ್ಮ ದಾವಣಗೆರೆ ಆಸ್ಪತ್ರೆಯಲ್ಲಿ ಮೃತಪಟ್ಟಿರುತ್ತಾರೆ ಎಂದು ನಾನು ಮರು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿ. ಆರೋಪಿಯನ್ನು ನೋಡಿದ್ದು ನೋಡಿದರೆ ಗುರುತಿಸುವುದಾಗಿ ಮರು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿ.

**ಪಾಟೀ ಸವಾಲುಃ ಶ್ರೀ ಬಿ.ಸಿ.ಬಿ., ಆರೋಪಿ ಪರ ವಕೀಲರಿಂದಃ**

ನನ್ನ ತಂದೆಯ ಹೆಸರು ನಾಗಪ್ಪ ಎಂದು ಕರೆಯುತ್ತಾರೆ ಎಂದರೆ ಸರಿ. ಅಪಘಾತವನ್ನು ನಾನು ಕಣ್ಣಾರೆ ನೋಡಿರುವುದಿಲ್ಲ. ಬೇರೆಯವರು ಹೇಳಿದ ಮೇರೆಗೆ ಹೇಳುತ್ತಿದ್ದೇನೆ. ನನಗೂ ಹಾಗೂ ಆರೋಪಿಗೆ ಸಂಪರ್ಕ ಇಲ್ಲದೇ ಇದ್ದರೂ ಆರೋಪಿ ಆಸ್ಪತ್ರೆ ಖರ್ಚು ನೀಡುತ್ತೇನೆ ಎಂದು ಹೇಳಿದ್ದರು ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸಾಕ್ಷಿಯು ನನಗೆ ಆರೋಪಿಯ ಸಂಪರ್ಕ ಇರಲಿಲ್ಲ ಎಂದು ನುಡಿಯುತ್ತಾರೆ. ಚಾಸಾ-1 ನನ್ನ ಸೊಸೆ. ಆರೋಪಿಯ ವಿರುದ್ಧ ನಾನು ಮತ್ತು ಚಾಸಾ-1 ರವರು ಪರಿಹಾರ ಪಡೆಯುವ ಸಲುವಾಗಿ ಪ್ರಕರಣ ದಾಖಲಿಸಿರುತ್ತೇವೆ. ನಾನು ಠಾಣೆಯಲ್ಲಿ ಹೇಳಿಕೆ ನೀಡಿಲ್ಲ ಎಂದರೆ ಸರಿ. ಪ್ರಕರಣಕ್ಕೂ ನನಗೂ ಸಂಬಂಧ ಇಲ್ಲದೇ ಇದ್ದರೂ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸರಿಯಿದೆ,

ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.,
ನ್ಯಾಯಾಧೀಶರು, ಚಳ್ಳಕೆರೆ